ಇವರೆಲ್ಲ ಸಾಹಿತ್ಯ ಕ್ಷೇತ್ರಕ್ಕೆ ಸೇರಿದವರು. ಸಿನಿಮಾ, ವಿಜ್ಞಾನ ಮುಂತಾದ ಇತರ ಕ್ಷೇತ್ರದಲ್ಲಿ ದುಡಿದ ಬಹಳಷ್ಟು ಮಹನೀಯರೂ ಇದ್ದಾರೆ. ಇವರೆಲ್ಲ ವೃತ್ತಿ ಜೀವನಕ್ಕಾಗಿ ತಮ್ಮ ಹುಟ್ಟೂರು, ನಾಡು ನುಡಿಗಳನ್ನು ಬಿಟ್ಟು ಬೇರೆಬೇರೆ ಪ್ರದೇಶ ಮತ್ತು ವಿದೇಶಗಳಿಗೆ ಹೋದವರು. ಅಂಥವರಲ್ಲಿ ಕೆ.ವಿ. ತಿರುಮಲೇಶ್ (1940-2023) ಕೂಡ ಒಬ್ಬರು. ಮೇಲೆ ಕಾಣಿಸಿದ ಬಹುತೇಕ ಎಲ್ಲರೂ ನಿವೃತ್ತಿಯ ನಂತರ ಹಿಂತಿರುಗಿ ತಮ್ಮ ತಮ್ಮ ಊರು, ನಾಡಿನಲ್ಲಿ ನೆಲಸಿದರು. ಕನ್ನಡ ಕಟ್ಟುವ ಕೆಲಸವನ್ನು ಮುಂದುವರಿಸಿದರು. ಇವರೆಲ್ಲ ಒಳನಾಡಿಗರಿಗಿಂತ ಒಂದು ತೂಕ ಹೆಚ್ಚು ಕನ್ನಡವನ್ನು ತಮ್ಮ ಭಾವಲೋಕದಲ್ಲಿ ಕಟ್ಟಿಕೊಂಡಿದ್ದವರು. ಅವರಲ್ಲಿ ತಿರುಮಲೇಶ್ ಮಾತ್ರ ತಮ್ಮ ನಾಡಿಗೆ ಹಿಂತಿರುಗಲು ಸಾಧ್ಯವಾಗಲಿಲ್ಲ. ಅವರು ಕನ್ನಡದ ಜೊತೆಗೆ ಕಟ್ಟಿಕೊಂಡಿದ್ದ ಸಂಬಂಧದ ಸ್ವರೂಪವನ್ನು ವಿವರಿಸಬೇಕಿಲ್ಲ. ತನ್ನ ನೆಲ ಕನ್ನಡನಾಡಿಗೆ ಸೇರಬೇಕು ಎಂಬ ಕಾರಣಕ್ಕೆ ಒಂದು ದಿನದ ಮಟ್ಟಿಗೆ ಸೆರೆಮನೆಗೂ ಹೋಗಿದ್ದ ತಿರುಮಲೇಶ್, ನಿವೃತ್ತಿಯ ನಂತರ ಊರಿಗೆ ಮರಳುವ ಆಲೋಚನೆ ಮಾಡಿದ್ದರೂ ಕಾಸರಗೋಡಿಗೆ ಹೋಗಬೇಕಾಗಿತ್ತೇ ವಿನಾ ಕನ್ನಡನಾಡಿಗೆ ಬರಲಾಗುತ್ತಿರಲಿಲ್ಲ. ಇಲ್ಲಿ ಅವರು ಮನೆಯನೆಂದೂ ಕಟ್ಟಿರಲಿಲ್ಲ. ಕನ್ನಡನಾಡಿಗೆ ಹಿಂತಿರುಗಲು ಸಾಧ್ಯವಾಗದ ಮೇಲೆ ಕಾಸರಗೋಡಾದರೇನು, ಹೈದರಾಬಾದಾದರೇನು ಎಂದು ಅವರ ಮನಸ್ಸಿಗೆ ಅನಿಸಿದ್ದಿರಬಹುದು. ಹೈದರಾಬಾದಿನಲ್ಲೆ ಕಣ್ಮುಚ್ಚಿದಾಗ (30 ಜನವರಿ, 2023) ಅವರಿಗೆ 82ರ ವಯಸ್ಸು. (ಅವರ ಕವಿತೆಯೊಂದರ ಸಾಲು '...ಕಾಸರಗೋಡಿನ ಕನ್ನಡಿಗರು ಬಯಸುತ್ತಾರೆ ಕರ್ನಾಟಕದೊಂದಿಗೆ ಸೇರಿಕೆಯನ್ನು...'). ಇದನ್ನು ಬರೆಯುತ್ತಿರುವ ಈ ಗಳಿಗೆಯಲ್ಲಿ ನನ್ನಲ್ಲಿ ಒಂದು ಅಪರಾಧ ಭಾವನೆ ಕಾಡುತ್ತಿದೆ.

ಲೆಕ್ಕವಿಲ್ಲದಷ್ಟು ಸಾರ್ತಿಯ ನಮ್ಮ ಭೆಟ್ಟಿಗಳಲ್ಲಿ ಯಾವಯಾವುದೋ ವಿಷಯಗಳ ಬಗ್ಗೆ ಮಾತು, ಹರಟೆ ಇರುತ್ತಿತ್ತು. ಒಮ್ಮೆ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯವರ 'ಜಿ ಕೆಟಗರಿ' ವಿವೇಚನಾ ಕೋಟಾದ ಬಗ್ಗೆ ಪ್ರಸ್ತಾಪ ಮಾಡಿದರು. ಅಂಥ ಒಂದು ವಿವೇಚನಾ ಕೋಟಾ ಸಾಮಾನ್ಯರನ್ನು ಕಡೆಗಣಿಸುವ ಪದ್ಧತಿ ಎಂದು ನನ್ನ ಅಭಿಪ್ರಾಯ ಹೇಳಿದೆ. ಆ ವೇಳೆಗೆ ಕೆಲವು ಪ್ರಶಸ್ತಿಗಳು ಬಂದಿದ್ದು ಅಂಥ ಪ್ರಯತ್ನವನ್ನು ಯಾಕೆ ಮಾಡಬಾರದೆಂಬ ಆಲೋಚನೆ ಅವರ ಮನಸ್ಸಿನಲ್ಲಿತ್ತೇನೋ ಕಾಣೆ. ಆಗಿನ ನನ್ನ ವಿವೇಚನಾರಹಿತ ಅಭಿಪ್ರಾಯ ಅದಕ್ಕೆ ಅಡ್ಡಿ ಆಗಿದ್ದಿರಬಹುದು ಎಂದು ಅನೇಕ ಬಾರಿ ನೆನಪಿಸಿಕೊಂಡು ಪೆಚ್ಚಾಗಿದ್ದೇನೆ. ಮುಂದೆ ನನಗೆ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಬಂದಾಗ ಕೆಲವು ಸ್ನೇಹಿತರು 'ಜಿ ಕೆಟಗರಿ'ಗೆ ಅರ್ಜಿ ಹಾಕಲು ಹೇಳಿದರು. ಆದರೆ ನನ್ನ ನಿಲುವು ಬದಲಾಗಿರಲಿಲ್ಲ.

ನಾನು ಇವರನ್ನು ಮೊದಲು ನೋಡಿದ್ದು ಯಾವಾಗ ಎಂಬುದು ನೆನಪಿಲ್ಲ. ಕವಿಗೋಷ್ಠಿಯೊಂದರಲ್ಲಿ ಅವರು ವಾಚಿಸಿದ 'ಕೇರಳದ ಹುಡುಗಿಯರು' ಪದ್ಯ ಕೇಳಿದ್ದು ನೆನಪಿದೆ. ನವ್ಯಕಾವ್ಯದಿಂದ ಪ್ರೇರಿತರಾಗಿದ್ದರೂ ಭಿನ್ನರಾಗಿ ಕಾವ್ಯ ಬರೆದ ಅವರು ನವ್ಯೋತ್ತರ ಕಾವ್ಯಮಾರ್ಗಕ್ಕೆ ಭಾಷಿಕ ನೆಲೆಯಲ್ಲಿ, ವಸ್ತುವೈವಿಧ್ಯದಲ್ಲಿ, ಅತಿ ಸಾಮಾನ್ಯ ಸಂಗತಿಗಳಲ್ಲೂ ಅರ್ಥ ಕಂಡರಿಸುವ ಕುತೂಹಲಕಾರಿ ಪ್ರಯೋಗಗಳನ್ನು ನಿರಂತರವಾಗಿ ಮಾಡುತ್ತ ಬಂದವರು. ಕನ್ನಡ ಭಾಷೆಗೆ ಒಂದು ವಿಶಿಷ್ಟ ಸ್ವಾತಂತ್ರ್ಯ ಮತ್ತು ಮುಕ್ತ ಗುಣವಿದೆಯೆಂದು ಅವರು ನಂಬಿದ್ದರು. ಅದನ್ನು ಸತತವಾಗಿ ಸಾಧಿಸಿ ತೋರಿಸಿದರು. ಅವರ ಕಾವ್ಯದ ಪ್ರಭಾವ ನಂತರದ ಕೆಲವು ಕವಿಗಳ ಮೇಲೆ ಪರಿಕಲ್ಪನೆ ಮತ್ತು ವಸ್ತುವಿನ ಆಯ್ಕೆಯ ನೆಲೆಯಲ್ಲಿ ಸ್ವಲ್ಪಮಟ್ಟಿಗೆ ಆಗಿದ್ದರೂ ಅವರಂತೆ ಕಾವ್ಯ ಬರೆದವರಿಲ್ಲ. ಅವರು ತೀರಿಕೊಂಡ ಸುದ್ದಿಗೆ, 'ತಿರುಮಲೇಶ್ ಇಲ್ಲದ ಮೇಲೆ ಕವನ ಎನ್ನುವುದಕ್ಕೇ ಅರ್ಥವಿಲ್ಲ,' ಎನ್ನುವ, ಕನ್ನಡದಲ್ಲಿ ಅತ್ಯುತ್ತಮ ಕಾವ್ಯ ಬರೆದ ಪ್ರತಿಭಾ ನಂದಕುಮಾರ್ ಅವರ ಪ್ರತಿಕ್ರಿಯೆ ಒಂದು ಸತ್ಯವಾಕ್ಯವೇ ಸರಿ. ಅವರ ಕಾವ್ಯ, ಸಾಹಿತ್ಯ ಕುರಿತು ಇಲ್ಲಿ ಬರೆಯುವ ಉದ್ದೇಶ ನನಗಿಲ್ಲ.

ಅವರ ಕವಿತೆಯ ವಾಚನವನ್ನು ಒಂದೆರಡು ಬಾರಿ ಕೇಳಿದ್ದ ನನಗೆ ಅವರ ವ್ಯಕ್ತಿಗತ ಪರಿಚಯವಿರಲಿಲ್ಲ. ಆದರೆ, ಅವರ ಬರವಣಿಗೆ ನನಗೆ ಇಷ್ಟವಾಗುತ್ತಿತ್ತು. ಲಂಕೇಶರ 'ಅಕ್ಷರ ಹೊಸ ಕಾವ್ಯ'ದಲ್ಲಿ ಅವರ ಕವಿತೆಗಳಿದ್ದದ್ದೂ ಒಂದು ಕಾರಣವಿರಬಹುದು. ಒಂದು ವಿಶೇಷ ಸಂದರ್ಭದಲ್ಲಿ ನಾವಿಬ್ಬರೂ ಮೂರ್ನಾಲ್ಕು